ಋ) ಆ ನಿಗಮವನ್ನು ಪ್ರಾರಂಭಿಸಿದ ಉದ್ದೇಶ ಸಫಲವಾಗಿದೆಯೇ?

ಋೂ)ಆ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ಜಲಾನಯನ ವಿತ ನೀರಾವರಿ ನಿಗಮವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಹಾಗೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೃಷ್ಣಾ ಜಲಾನಯನ ವಿತ ನೀರಾವರಿ ನಿಗಮವನ್ನು ಬಿಜಾಪುರದಲ್ಲಿ ಸ್ಥಾಪನೆ ಮಾಡಲಾಗಿದೆ.

ಆ) ಅವುಗಳನ್ನು ಕ್ರಮವಾಗಿ 2-6-86ರಂದು ಮೈಸೂರಿನಲ್ಲಿ ಹಾಗೂ 9-6-86ರಂದು ಬಿಜಾಪುರದಲ್ಲಿ ಸ್ಥಾಪಿಸಲಾಗಿದೆ.

ಇ) ರಾಜ್ಯದಲ್ಲಿ ಜಲಸಂಪನ್ಮೂಲವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಶೀಘ್ರಗತಿಯಲ್ಲಿ ವಿತ ನೀರಾವರಿ ಯೋಜನೆಗಳ ಕಾಮಗಾರಿಯನ್ನು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದುಕೊಂಡು ಪೂರ್ಣಗೊಳಿಸಲು ಈ ನಿಗಮವನ್ನು ಸ್ಥಾಪಿಸಲಾಯಿತು.

ಈ) ತಲಾ 55 ಲಕ್ಷ ರೂ.ಗಳ ಬಂಡವಾಳವಿದೆ.

ಉ)

ನಿಗಮದ	ಸಿಬ್ಬಂದಿ	ಎರವಲು ಸಿಬ್ಬಂದಿ	ಒಟ್ಟು
ಕಾವೇರಿ ಜಲಾನಯನ ವಿತ ನೀರಾವರಿ ನಿಗಮ	193	11	204
ಕೃಷ್ಣಾ ಜಲಾನಯನ ವಿತ ನೀರಾವರಿ ನಿಗಮ	163	11	174
	356	22	678

ಊ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಋ) ಇಲ್ಲ

ಋೂ) ಪ್ರಶ್ನೆ ಉದ್ಭವಿಸುವುದಿಲ್ಲ

ತುಮಕೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರುವ ಹಣದ ಬಗ್ಗೆ

697 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರ ಸಾಲಿನಲ್ಲಿ ತುಮಕೂರು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರ ಒದಗಿಸಿದ ಹಣವೆಷ್ಟು ಹಾಗೂ ತಾಲ್ಲೂಕುವಾರು ಮಾಡಿದ ಖರ್ಚು ಎಷ್ಟು?

ಆ) ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮತಿ ಪಡೆಯದೆ ಸಾಮಗ್ರಿಗಳನ್ನು ಖರೀದಿಸಿ ಹಣ ದುರುಪಯೋಗ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ತೆಗೆದುಕೊಂಡು ಕ್ರಮವೇನು?

ಇ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ವಿವಿಧ ಬಾಬ್ತಿಗಾಗಿ ಮಂಜೂರಾದ ಹಣವೆಷ್ಟು ಹಾಗೂ ವಿತರಿಸಿದ ಹಣವೆಷ್ಟು ಮತ್ತು ಇನ್ನೂ ಕೊಡಬೇಕಾದ ಹಣ ಎಷ್ಟು?

ಶ್ರೀ ಕೆ.ಪಿಜ್. ರಂಗನಾಥ್ (ಲೋಕೋಪಯೋಗಿ ಸಚಿವರು): ಅ) ತುಮಕೂರು ಜಿಲ್ಲೆಯ ಲೋಕೋಪಯೋಗಿ ವಿಭಾಗದ ಕಾಮಗಾರಿಗಳಿಗೆ ವಿವಿಧ ಶೀರ್ಷಿಕೆಯಡಿ 1993-94ನೇ ಸಾಲಿಗೆ ಒದಗಿಸಿರುವ ಅನುದಾನ ಮತ್ತು 2:94ರವರೆಗೆ ಮಾಡಿರುವ ಖರ್ಚಿನ ವಿವರ ಈ ಕೆಳಕಂಡಂತಿದೆ

(ಲಕ್ಷಗಳಲ್ಲಿ)

ತಾಲ್ಲೂಕು	ಅನುದಾನ	ಖರ್ಚು
ತುಮಕೂರು	923.625	63.93
ಗುಬ್ಬಿ	"	37.31
ಕುಣಿಗಲ್	"	19.89
ತುರುವೇಕೆರೆ	"	23.86
ತಿಪಟೂರು	"	21.63
ಚಿಕ್ಕನಾಯಕನಪಳ್ಳಿ	"	15.99
ಶಿರಾ	"	33.04
ಕೊರಟಗೆರೆ	"	15.20
ಮಧುಗಿರಿ	"	67.39
ಪಾವಗಡ	"	14.11
ಒಟ್ಟು	923.625	312.35

ಆ) ಕೆಲವು ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು ವಿಷಯಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ಪರಿಶೀಲಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಅಭಿವೃದ್ಧಿ ಕಾಮಗಾರಿಗಳಿಗೆ 1993-94ನೇ ಸಾಲಿಗೆ ವಿವಿಧ ಶೀರ್ಷಿಕೆಯಡಿಯಲ್ಲಿ 91.274 ಲಕ್ಷ ರೂ.ಗಳ ಅನುದಾನ ಲಭ್ಯವಿದ್ದು ಇಲ್ಲಿಯವರೆಗೆ 47.236 ಲಕ್ಷ ರೂ.ಗಳ ಪ್ರಗತಿ ಸಾಧಿಸಿ 16.319 ಲಕ್ಷ ರೂ.ಗಳ ಖರ್ಚು ಮಾಡಿದ್ದು ಇನ್ನೂ 39.92 ಲಕ್ಷ ರೂ.ಗಳನ್ನು ಪಾವತಿ ಮಾಡಬೇಕಾಗಿದೆ.

ಹೈಡ್ರೋ ಇಲೆಕ್ಟ್ರಿಕ್ ಉತ್ಪಾದನೆಗಾಗಿ ಯೋಜಿಸಿರುವ ಯೋಜನೆಗಳ ವಿವರ ಕುರಿತು

653 - ಶ್ರೀ ಮಲ್ಲಾರಿ ಗೌಡ. ಎಸ್. ಪಾಟೀಲ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇಕೆದಾಟು, ಆಲಮಟ್ಟಿ ನಾರಾಯಣಪುರ ಶಿವನಸಮುದ್ರಂ ಮತ್ತು ಗೋಕಾದ ಎಡದಂಡೆ ಭಾಗಗಳಲ್ಲಿ ಹೊಸ ವಿದ್ಯುತ್ ಘಟಕ ಹಾಗೂ ಇನ್ನೂ ಹೆಚ್ಚು ಅವಕಾಶವಿರುವ ವಿದ್ಯುತ್ ಉತ್ಪಾದನಾ ಘಟಕದ ಪ್ರಾರಂಭಕ್ಕಾಗಿ ಸರ್ಕಾರದ ಕಾರ್ಯಕ್ರಮ ಏನು?

ಆ) ವಿದ್ಯುತ್ ಉತ್ಪಾದನೆಗಾಗಿ ಅಣುಸ್ಥಾವರ ಹಾಗೂ ಥರ್ಮಲ್ ಪವರ್ ಸ್ಟೇಶನ್ನನ ನಿರ್ಮಾಣಕ್ಕಾಗಿ ಪರರಾಷ್ಟ್ರದಿಂದ ಕರ್ನಾಟಕ ಸರ್ಕಾರಕ್ಕೆ ವಿನಂತಿ ಮಾಡಿರುವ ಕಂಪನಿಗಳ ಹೆಸರುಗಳೇನು?